ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ : ಸಿ5(5) ಬಡ್ತಿ-19/2013-14 ದಿನಾಂಕ : 15-03-2018

ಜ್ಞಾಪನ

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಬೆರಳಚ್ಚುಗಾರರುಗಳಿಗೆ ಶೀಘ್ರಲಿಪಿಗಾರರ ಹುದ್ದೆಗಳಿಗೆ ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸುವ ಬಗ್ಗೆ

* * * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರ ಹುದ್ದೆಗೆ ಸೇವಾ ಜೇಷ್ಠತೆಯ ಆಧಾರದ ಮೇಲೆ ಅರ್ಹರಿರುವ ಬೆರಳಚ್ಚುಗಾರರಿಗೆ ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಸ್ಥಳ ನಿಯುಕ್ತಿಗೊಳಿಸಲು ಉದ್ದೇಶಿಸಲಾಗಿದೆ. ಬೆರಳಚ್ಚುಗಾರರ ಜೇಷ್ಠತಾ ಪಟ್ಟಿಯನ್ನು ಈ ಕಛೇರಿಯ ಜ್ಞಾಪನ ಸಂಖ್ಯೆ : ಸಿ5(5)ಬೆ.ಜೇ.ಪ-06/2017-18 ದಿನಾಂಕ : 14-11-2017 ರಂತೆ ಇಲಾಖಾ ಅಂತರ್ಜಾಲತಾಣ (ವೆಬ್‌ಸೈಟ್) ದಲ್ಲಿ ಪ್ರಕಟಿಸಲಾಗಿದೆ. ತಮ್ಮ ವಿಭಾಗ/ಜಿಲ್ಲೆ/ಕಛೇರಿಯಲ್ಲಿ ಹಿರಿಯ ಕನ್ನಡ ಬೆರಳಚ್ಚು ಹಾಗೂ ಹಿರಿಯ ಕನ್ನಡ ಶೀಘ್ರಲಿಪಿ ಪರೀಕ್ಷೆಗಳಲ್ಲಿ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಬೆರಳಚ್ಚುಗಾರರ ಪ್ರಸ್ತಾವನೆಯನ್ನು ಪ್ರತಿ ಸಿಬ್ಬಂದಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು / ಮಾಹಿತಿಗಳನ್ನು ಸಿಬ್ಬಂದಿವಾರು ಪ್ರತ್ಯೇಕ ಡೋಸಿಯರ್ ಸಿದ್ಧಪಡಿಸಿ ಆದ್ಯತೆಯ ಮೇರೆಗೆ ಈ ಕಛೇರಿಗೆ ಮುದ್ದಾಂ ಸಲ್ಲಿಸಲು ತಿಳಿಸಿದೆ.

1. 2013-14 ರಿಂದ 2016-17 ನೇ ಸಾಲಿನವರೆಗಿನ ನೌಕರರ ಕಾರ್ಯ ನಿರ್ವಹಣಾ ವರದಿಗಳು[ ಅ) ಪ್ರತಿ ಕಾರ್ಯ ನಿರ್ವಹಣಾ ವರದಿಗೆ ಪರಿಶೀಲನಾಧಿಕಾರಿಗಳ ಅಂಗೀಕಾರ, ಪುನರಾವಲೋಕನ ಪ್ರಾಧಿಕಾರದ ದೃಢೀಕರಣದೊಂದಿಗೆ ಸಲ್ಲಿಸುವುದು ಆ) ಒಂದು ವರ್ಷದ / ಸಾಲಿನ ಕಾರ್ಯ ನಿರ್ವಹಣಾ ವರದಿಯನ್ನು ಅನಿವಾರ್ಯ ಕಾರಣಗಳಿಂದ ಸಲ್ಲಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಮಾತ್ರ ವಿಶೇಷ ವರದಿ ಸಲ್ಲಿಸಬಹುದು]
2. ಹಿರಿಯ ಕನ್ನಡ ಬೆರಳಚ್ಚು ಹಾಗೂ ಹಿರಿಯ ಕನ್ನಡ ಶೀಘ್ರಲಿಪಿ ಪರೀಕ್ಷೆಗಳಲ್ಲಿ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಪ್ರಮಾಣ ಪತ್ರಗಳ ಪ್ರತಿ ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಪ್ರತಿ[ದೃಢೀಕರಿಸಿ ಸಲ್ಲಿಸುವುದು]
3. ಸಂಬಂಧಿಸಿದ ನೌಕರರ ವಿರುದ್ಧ ಯಾವುದೇ ಇಲಾಖಾ ವಿಚಾರಣೆಯಾಗಲೀ / ನ್ಯಾಯಾಂಗ ಪ್ರಕರಣವಾಗಲೀ ಬಾಕಿ ಇಲ್ಲದೇ ಇರುವ ದೃಢೀಕರಣ ಪತ್ರ .[ಇಲಾಖಾ ವಿಚಾರಣೆಯಾಗಲೀ / ನ್ಯಾಯಾಂಗ ಪ್ರಕರಣವಾಗಲೀ ಬಾಕಿ ಇದ್ದಲ್ಲಿ ಸಂಪೂರ್ಣ ವಿವರ]
4. ಈ ಪತ್ರದೊಂದಿಗೆ ನೀಡಲಾಗಿರುವ ನಮೂನೆಯಲ್ಲಿ ನೌಕರರ ಸೇವಾ ವಿವರ.

ಪ್ರತಿ ಸಿಬ್ಬಂದಿವಾರು ಮಾಹಿತಿ / ದಾಖಲೆಗಳನ್ನು ಒಳಗೊಂಡಿರುವ ಪ್ರಸ್ತಾವನೆಯನ್ನು ದಿನಾಂಕ: 20-03-2018 ರೊಳಗಾಗಿ ಈ ಕಛೇರಿಗೆ ತಲುಪುವಂತೆ ಸಹಾಯಕ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. ಇವರಿಗೆ ಕಳುಹಿಸಿಕೊಡಲು ಸೂಚಿಸಲಾಗಿದೆ.

(ಕೆ.ಬಿ.ಆಂಜನಪ್ಪ)
ಅಪರ ನಿರ್ದೇಶಕರು (ಆಡಳಿತ)

ಇವರಿಗೆ :-

1) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳುರು.
2) ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
3) ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು.
5) ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.
6) ಸಾರ್ವಜನಿಕ ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕರಿಗೆ ಮುಂದಿನ ಕ್ರಮಕ್ಕಾಗಿ.
7) ಸಹ ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು.
8) ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮೈಸೂರು, ಚಿತ್ರದುರ್ಗ ಮತ್ತು ಮಂಗಳೂರು.
9) ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿನ ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ ಮುಂದಿನ ಕ್ರಮಕ್ಕಾಗಿ
10) ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿನ ಎಲ್ಲಾ ಜಿಲ್ಲೆಗಳ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ
11) ಕಛೇರಿ ಪ್ರತಿ.

e:\2-ob backup\pc backup\steno promotion.docx